సిరి
పంట



407

ಲೇಖಕರು :

ಶಾಂತಿರಾಂ

ಶಾಂತಿನಗರ, ಬೆಂಗಳೂರು—೨೭

ದ್ವಿತೀಯ ಮುದ್ರಣ

1979

ಕ್ರಯ : ರೂ. 2-00

ಮುನ್ನುಡಿ

"ಮರಿದುಂಬಿ" ಮಕ್ಕಳಿಗಾಗಿ ಬರೆದ ಸಣ್ಣ ಕವನಗಳ ಸಂಗ್ರಹ. ಮಕ್ಕಳಿಗೆ ಅರ್ಥವಾಗುವಂತೆ, ಹುಡುಗರು ಹಾಡಿಕೊಳ್ಳಲು ಅನುಕೂಲವಾಗುವಂತೆ, ಅವರಿಗೆ ತಿಳಿದಿರುವ ವಿಷಯಗಳನ್ನೇ ಆರಿಸಿಕೊಂಡು ಈ ಕವನಗಳನ್ನು ಕಟ್ಟಿದ್ದಾರೆ. ಇವುಗಳಲ್ಲಿ ಕೆಲವು ಕಥನ ಕವನಗಳೂ ಇವೆ. ಶ್ರೀ ಎಸ್. ರಾಮಪ್ಪನವರ ಬರಹ ಸುಲಭವಾಗಿದ್ದು ಸರಾಗವಾಗಿ ಪದ್ಯಗಳು ಓದಿಸಿಕೊಂಡು ಹೋಗುತ್ತವೆ. ಅವರ ಈ ಕವನ ಸಂಕಲನ ಬಾಲಕರಿಗೆ ಪ್ರಿಯವಾಗಿ ಕೃತಿಕಾರರ ಪ್ರಯತ್ನ ಸಫಲವಾಗಲಿ ಎಂದು ಹಾರೈಸುತ್ತೇನೆ.

ಬೆಂಗಳೂರು
ದಿನಾಂಕ ೨೬-೧೦-೧೯೭೬

ಜಿ. ನಾರಾಯಣ
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಅರಿಕೆ

ನನ್ನ ಮೊದಲನೆಯ ಕವನ ಸಂಗ್ರಹ "ಬೆಳುದಿಂಗಳು" ಅನ್ನು ಪ್ರೀತ್ಯಾದರಗಳಿಂದ ಸ್ವೀಕರಿಸಿ, ಪ್ರೋತ್ಸಾಹಿಸಿದಿರಿ. ಆ ನಿಮ್ಮ ಪ್ರೋತ್ಸಾಹವೇ ಅದು ಮೂರು ಬಾರಿ ಮುದ್ರಣ ಕಾಣಲು ಕಾರಣವಾಯಿತು. "ಬೆಳುದಿಂಗಳು" ಕವನ ಸಂಗ್ರಹವನ್ನು ವಿದ್ಯಾ ಇಲಾಖೆ ನಿರ್ದೇಶಕರು ತಮ್ಮ ಆಫೀಸ್ ನಂ. T 4.524-14/59-60 ಪ್ರಕಾರ ಕರ್ನಾಟಕದ ಎಲ್ಲಾ ಪ್ರಾಥಮಿಕ ಶಾಲೆಗಳು ತಮ್ಮ ಲೈಬ್ರರಿಗಳಿಗೆ ಕೊಂಡುಕೊಳ್ಳುವಂತೆ ಆದೇಶ ನೀಡಿ, ಉಪಕರಿಸಿದ್ದಾರೆ. ವಿದ್ಯಾ ಇಲಾಖೆಗೆ ನಾನು ಸದಾ ಚಿರಋಣಿಯಾಗಿದ್ದೇನೆ.

ನನ್ನ ಕವನಗಳು ಮಕ್ಕಳ ಮನಸ್ಸನ್ನು ಅರಿತು ಮಕ್ಕಳ ಸಂತೋಷಕ್ಕಾಗಿ ಮಕ್ಕಳ ನಲ್ಮೆ ಜಾಣ್ಮೆಗಳು ಉಕ್ಕುವಂತಾಗಲು ಮಾಡಬೇಕೆಂಬುದೇ ನನ್ನ ಆಸೆ. ಹಿರಿಯ ಕವಿಗಳೂ, ಕಾದಂಬರಿಕಾರರೂ ಮತ್ತು ಕಥಾಕಾರರೂ ಇದನ್ನು ಓದಿ ಆನಂದಿಸಿ ನನಗೆ ಅಚ್ಚುಹಾಕಿಸಲು ಬಹು ಹಿಂದೆಯೇ ಪ್ರೋತ್ಸಾಹಿಸಿದರು. ಅವರ ಪ್ರೋತ್ಸಾಹಗಳಿಂದ ಸ್ಫೂರ್ತಿ ಪಡೆದವನಾಗಿ ನನ್ನ ಕವನಗಳನ್ನು "ಮರಿದುಂಬಿ" ಎಂಬ ಶಿರೋನಾಮೆಯಲ್ಲಿ ಎರಡನೆಯ ಕುಸುಮವಾಗಿ ಹೊರ ತರುತ್ತಿದ್ದೇನೆ. ನಮ್ಮ ಕನ್ನಡ ಜನತೆ ಈ ಮಕ್ಕಳ ಕವನ ಸಂಗ್ರಹವನ್ನು ಓದಿ, ಓದಿಸಿ, ಕೇಳಿ, ಕೇಳಿಸಿ ಆನಂದಿಸಬೇಕೆಂಬುದೇ ನನ್ನ ಇಚ್ಛೆ.

ನನ್ನ ಈ ಪುಟ್ಟ ಕವನ ಸಂಗ್ರಹಕ್ಕೆ ಮುದ್ದಾಗಿ ಮುನ್ನುಡಿಯನ್ನು ಬರೆದುಕೊಟ್ಟು, ಆಶೀರ್ವದಿಸಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿ. ನಾರಾಯಣರವರಿಗೆ ನಾನು ತುಂಬಾ ಆಭಾರಿಯಾಗಿದ್ದೇನೆ.

ಅಲ್ಲದೆ ನನ್ನ ಕವನ ಸಂಗ್ರಹ ಪುಸ್ತಕದ ಮುಖಪುಟವನ್ನು ಅಂದವಾಗಿ ಬರೆದುಕೊಟ್ಟು ಸಹಕರಿಸಿದ ನನ್ನ ಸ್ನೇಹಿತರೂ ಹಿತಚಿಂತಕರೂ ಆದ ಶ್ರೀ ಎಸ್. ನರಸಿಂಹಯ್ಯ, ವಿದ್ಯಾ ಇಲಾಖೆ, ಬೆಂಗಳೂರು ಇವರಿಗೆ ನನ್ನ ಕೃತಜ್ಞತೆಗಳು ಮತ್ತು ಅತ್ಯಲ್ಪ ಕಾಲಾವಧಿಯಲ್ಲಿ ಅಂದವಾಗಿ ಮುದ್ರಿಸಿ, ಕವನ ಸಂಗ್ರಹವು ಕನ್ನಡ ಜನತೆಯ ಕೈ ಸೇರುವಂತೆ ಮಾಡಿರುವ "ರೋಹಿಣಿ ಪ್ರಿಂಟರ್ಸ್" ರವರಿಗೂ ನನ್ನ ಕೃತಜ್ಞತೆಗಳು.

ಸದಾ ಕನ್ನಡಮ್ಮನ ಮಕ್ಕಳ ಮನ ನಲಿಯಲೆಂದೇ ರಚಿಸುವ ನನ್ನ ಕೃತಿಗಳು ಹೊರಬರಲು ಕನ್ನಡ ಜನತೆಯ ಪ್ರೋತ್ಸಾಹ ಸದಾ ಇರಲೆಂದು ಬೇಡುವ,

ಎಸ್. ರಾಮಪ್ಪ

(ಶಾಂತಿರಾಂ)

ಪರಿವಿಡಿ

ಬನದ ಕೋಗಿಲೆ

ಜಗವ ಮರೆತು
ಮಧುರ ಗಾನ
ಹಾಡು ನೀನು ಕೋಗಿಲೆ
ಹೃದಯ ವೀಣೆ
ಮಿಡಿವೆ ಏನು
ಬನದ ಸಿರಿಯು ಕೋಗಿಲೆ

ನೀನೆ ಕಣಾ
ಬನದ ಉಸಿರು
ಮಧುರವಾಣಿ ಕೋಗಿಲೆ
ಚೆಂದದಿಂದ
ಹಾಡು ಹೇಳಿ
ಮನವ ತಣಿಸು ಕೋಗಿಲೆ

ಬನದ ದೇವಿ
ಒಲಿದು ನಿನಗೆ
ಹೃದಯ ವೀಣೆ ಕೊಟ್ಟಳೆ !
ಸರಸಿಜಾತೆ
ಒಲಿದು ನಿನಗೆ
ಮಿಡಿವ ಶಕ್ತಿ ಕೊಟ್ಟಳೆ !

ನಿನ್ನ ಕಂಠ
ತುಂಬು ಮಧುರ
ಅಮರವಾಣಿ ಕೋಗಿಲೆ
ಹೃದಯ ವೀಣೆ
ಮಿಡಿವ ಶಕ್ತಿ
ಜಗಕೆ ನೀಡೆ ಕೋಗಿಲೆ

* * *

ಬಾಲರ ಗೆಳೆಯ

ಚಂದಿರ ಮಾಮನು
ಸುಂದರ ಸೋಮನು
ತೇಲುತ ಬಂದನು ಬಾನಲ್ಲಿ
ಬುವಿಯನು ಕಂಡನು
ನಲಿಯುತ ಬಂದನು
ಬೆಳಕನು ತಂದನು ನಮಗಿಲ್ಲಿ

ಬಾಲರು ಬಂದರು
ಓಡುತ ಎಲ್ಲರು
ಆಡಲು ಬೆಳ್ಳಿಯ ಬೆಳಕಲ್ಲಿ
ಚಂದಿರ ಮಾಮಾ
ಆಡಲು ಬಾ ಬಾ
ಎನ್ನುತ ಕರೆದರು ಹರುಷದಲಿ

ಬಾಲರ ಕೂಗನು
ಲಾಲಿಸಿ ಚಂದ್ರನು
ಮನದಲೆ ನಕ್ಕನು ಒಲವಿಂದ
ಕೂಡಲೆ ಬಂದನು
ಆಡಲು ಚಂದ್ರನು
ಬಾಲರ ಜೊತೆಯೊಳು ಗೆಲುವಿಂದ

* * *

ವಿಮಾನವಿದೆಯಣ್ಣಾ

ವಿಮಾನವಿದೆಯಣ್ಣಾ
ನಮ್ಮಾ ನಾಡೊಳು
ವಿಮಾನವಿದೆಯಣ್ಣಾ

ವಿಮಾನವೆಂದರೆ ಏರೋಪ್ಲೇನ್
ಗಗನದಲ್ಲಿಯೆ ಹಾರುವ ಪ್ಲೇನ್
ನಗರದ ಮೇಗಡೆ ಸುತ್ತುವ ಪ್ಲೇನ್
ವಿದೇಶ ಯಾತ್ರೆಯ ಮಾಡುವ ಪ್ಲೇನ್ ||೧||

ಝೀಂ ಝೀಂ ಶಬ್ದ ಮಾಡುವ ಪ್ಲೇನ್
ಗುಂಯ್ ಗುಂಯ್ ಎಂದು ಹಾಡುವ ಪ್ಲೇನ್
ಉಲ್ಟಾಪಲ್ಟಿ ಹಾಕುವ ಪ್ಲೇನ್
ಮನಸಿಗೆ ಹರ್ಷವ ನೀಡುವ ಪ್ಲೇನ್ ||೨||

ಮದರಾಸ್ ನಗರವ ನೋಡುವುದಕ್ಕೆ
ಬೊಂಬಾಯ್ ನಗರವ ಕಾಣುವುದಕ್ಕೆ
ವಿಮಾನ ಯಾತ್ರೆಯ ಮಾಡುವುದಕ್ಕೆ
ಮಕ್ಕಳ ಮನವನು ನಲಿಸುವುದಕ್ಕೆ ||೩||

ಸಾಮಾನ್ ಸರಕು ಸಾಗಿಪುದಕ್ಕೆ
ಟಪ್ಪಾಲ್ ಸುದ್ದಿ ತಿಳಿಸುವುದಕ್ಕೆ
ಸಡಗರದಿಂದಲಿ ನಿಮಿಷ ಮಾತ್ರಕೆ
ಹಾರುತ ಮನೆಯನು ಸೇರುವುದಕ್ಕೆ ||೪||

× × ×

ಕಾ ರಂ ಜಿ

ಬಣ್ಣದ ನೀರಿನ ಕಾರಂಜಿ
ಸುರಿಮಳೆ ಸುರಿಸುವ ಕಾರಂಜಿ
ಸರುವರ ಕರೆಯುವ ಕಾರಂಜಿ
ಕಬ್ಬನ್ ಪಾರ್ಕಿನ ಕಾರಂಜಿ.

ಸರಸರ ಚಿಮ್ಮುವ ಕಾರಂಜಿ
ನೀರಿನ ಬುಗ್ಗೆಯು ಕಾರಂಜಿ
ಸುಮಗಳ ವನದಾ ಕಾರಂಜಿ
ಕಂದರ ಕುಣಿಸುವ ಕಾರಂಜಿ.

ಸಿಂಗರ ಸ್ತ್ರೀಯರ ಕರೆಯುವುದು
ಮಂಗಳ ಹೃದಯರ ನಗಿಸುವುದು
ಸಂತಸದಿಂದಲಿ ಕುಣಿಸುವುದು
ಕಾಂತಿಯನವರಲಿ ಚಿಮ್ಮುವುದು.

ಜರ ಬರ ಸದ್ದನು ಮಾಡುತಲಿ
ಹನಿಗಳ ಹೂವನು ಸುರಿಸುತಲಿ
ಸರಸರ ಚಿಮ್ಮುತ ರಭಸದಲಿ
ಗಗನವ ಮುಟ್ಟಿದೆ ಕಾರಂಜಿ.

× × ×

ಮರಿದುಂಬಿ

ಹೊಂಗೆ ಹೂ ತೊಂಗಲಿಗೆ
ಬಂತೊಂದು ದುಂಬಿ
ಅದುವೆ ಮರಿದುಂಬಿ
ಆಹ! ಹುರಿದುಂಬಿ!

ಎಲ್ಲೆಲ್ಲಿ ಹೋದರೂ
ಎಲ್ಲೆಲ್ಲಿ ಬಂದರೂ
ಎಲ್ಲೆಲ್ಲಿ ನೋಡಿದರೂ ಮರಿದುಂಬಿ
ಎಲ್ಲೆಲ್ಲಿ ನಿಂತರೂ
ಎಲ್ಲೆಲ್ಲಿ ಕುಂತರೂ
ಅಲ್ಲಲ್ಲಿ ಬರುವುದದು ಹುರಿದುಂಬಿ ||೧||

ಆ ಕೊಳದ ಹೂವಿಗೂ
ಈ ಕೊಳದ ಹೂವಿಗೂ
ಗಿಡ ಗಿಡದ ಹೂವಿಗೂ ಮರಿದುಂಬಿ
ಬನ ಬನದ ಹೂವಿಗೂ
ಮನೆ ಬಳಿಯ ಹೂವಿಗೂ
ಬಿರಬಿರನೆ ಬರುವುದದು ಹುರಿದುಂಬಿ ||೨||

ಸುಮಗಳಲಿ ನೇಹವಂತೆ
ಮರಿದುಂಬಿಗಿಹುದಂತೆ
ಮೈಗೆಲ್ಲ ಗಂಧವಂತೆ ಸುಮಗಂಧ
ಮೈಯೆಲ್ಲ ಸವರಿಕೊಂಡು
ಗಂಧವನು ಹರಡಿಕೊಂಡು
ರಾಗವನು ಹಾಡಿಕೊಂಡು ಸೊಗಸಿಂದ ||೩||

ಹಗಲೀಗೆ ರವಿಯಾಸೆ
ಇರುಳೀಗೆ ಶಶಿಯಾಸೆ
ತಾಯಿಗೆ ಇಹುದಂತೆ ಮಗುವಾಸೆ
ಹಂಸಕ್ಕೆ ಕೊಳದಾಸೆ
ಹೆಣ್ಣೀಗೆ ಹೂವಾಸೆ
ಮರಿದುಂಬಿಗಿಹುದಂತೆ ಮಧುವಾಸೆ ||೪||

* * *

ತಂಗಾಳಿ ಬೀಸುತಿದೆ

ತಂಗಾಳಿ ಬೀಸುತಿದೆ
ಪರಿಮಳವ ಸೂಸುತಿದೆ
ಸುಂದರ ಹೂಗಳಲಿ—ಹೂಗಳಲ್ಲಿ.

ಚಂದನದ ಆಮೋದ
ಬನ ಬನದ ಹೂಗಂಧ
ಬೀರುತಿದೆ ಬೀರುತಿದೆ—ಗಾಳಿಯಲ್ಲಿ.

ಜಲಪಾತ ಕರೆಯುತಿದೆ
ಕಂಗಳನು ತಣಿಸುತಿದೆ
ಸೊಬಗಿನಲಿ ರಮ್ಯವಹ—ಸೊಬಗಿನಲ್ಲಿ.

ಆಯಾಸ ತೀರುತಿದೆ
ಆನಂದವಾಗುತಿದೆ
ಎನ್ನ ಕಣ್ಣಲಿ ಮನದ—ಕಣ್ಣಿನಲ್ಲಿ.

ಕೋಗಿಲೆಯು ಹಾಡುತಿದೆ
ನವಿಲು ತಾ ಕುಣಿಯುತಿದೆ
ಹರುಷದಲಿ ಅಸಮಾನ—ಹರುಷದಲ್ಲಿ.

ತಂಬೆಲರ ತಂಗಾಳಿ
ಪರಿಮಳವ ಜಗಕೆರಚಿ
ನಲಿಸುತಿದೆ ಜಗವನ್ನು—ಪುಣ್ಯವಲ್ಲಿ.

* * *

ಮಲ್ಲಿಗೆ ಎನ್ನಿ

ಮಲ್ಲಿಗೆ ಎನ್ನಿ! ಸಂಪಿಗೆ ಎನ್ನಿ! ಜಾಜೀ ಎನ್ನಿ!
ಒಂದೇ ಪರಿಮಳ ನೀಡುವುದೆನ್ನಿ.

ಕೊರಳಲಿ ಮಲ್ಲಿಗೆ ಮಾಲೆಯು ಧರಿಸಿ
ಶಿರದಲಿ ಸಂಪಿಗೆ ದಂಡೆಯು ಧರಿಸಿ
ಜಾಜಿಯ ಹೂವನು ಜಡೆಯೊಳು ಇಟ್ಟು
ಬರುತಿಹಳಮ್ಮಾ ಕನ್ನಡದಮ್ಮಾ

ಕನ್ನಡವೆಂಬುದು ಕಸ್ತೂರಿಯಂತೆ
ಕನ್ನಡ ಮಕ್ಕಳ ಚೆನ್ನುಡಿಯಂತೆ
ಕನ್ನಡ ಕವಿಗಳ ಹರಸಲು ಮಾತೆ
ಬರುತಿಹಳಮ್ಮಾ ಕನ್ನಡದಮ್ಮಾ

ಕಲೆಗಳ ಬೀಡಿದು ಕನ್ನಡ ನಾಡು
ಕಲಿಗಳು ಆಳಿದ ಉನ್ನತ ನಾಡು
ಜಯ ಜಯ ಗೀತೆಯ ಹಾಡುತ ಮಾತೆ
ಬರುತಿಹಳಮ್ಮಾ ಕನ್ನಡದಮ್ಮಾ.

*   *   *

ಬಾ ಬೇಗ ಬಾ ಮಗನೆ

ಎಲ್ಲಿ ಹೋದೆಯೊ ಮಗನೆ ನನ ಬಿಟ್ಟು ಮುಪ್ಪಿನಲಿ
ಎಂದು ಬರುವೆಯೊ ಎಂದು ತಪಿಸುತಿಹೆ ನಾನಿಲ್ಲಿ ||

ನವಮಾಸ ಗರ್ಭದೊಳು ಸಾಕಿ ಸಲುಹಿದೆ ನಿನ್ನ
ಹಾಲು ಕುಡಿಸಿದೆ ನಿನಗೆ ಹಸಿದಾಗ ನನ ಚಿನ್ನ
ಓಡೋಡಿ ನಾ ಬಂದೆ ಅಳುವಾಗ ತೂಗೆ ನಿನ
ನಾ ನಗುವೆ ಅಂಬೆಗಾಲಿಡುವಾಗ ನೋಡಿ ನಿನ ||೧||

ಓದು ಕಲಿಸಲು ನಿನಗೆ ಎಷ್ಟು ಕಷ್ಟವ ಪಟ್ಟೆ
ನಿಜವಾಗಿ ನಾನಂದು ಸುಖದಿಂದ ನಿನ್ನಿಟ್ಟೆ
ನೀನಂತು ನನ್ನಿಂದು ಮರೆತಂತೆ ಕಾಣುತಿದೆ
ನೋಡಲಾಗದೆ ನಿನ್ನ ಕಣ್ಣೀರು ಕರೆಯುತಿದೆ ||೨||

ಹಗಲೆಲ್ಲ, ಇರುಳೆಲ್ಲ, ಕನಸಲ್ಲಿ, ಮನಸಲ್ಲಿ,
ಎಲ್ಲೆಲ್ಲಿ ನಿಂತಲ್ಲಿ ಅಲ್ಲಲ್ಲೆ ಕುಂತಲ್ಲಿ
ಹೃದಯ ಮಂದಿರವನ್ನು ಒಳಹೊಕ್ಕು ನಿಂತಂತೆ
ಕಂಗಳಿಗೆ ನಿನ ರೂಪು ಎದುರಲ್ಲಿ ಕಾಣುತಿದೆ ||೩||

ಕನಸೆಲ್ಲ ನನಸಾಗಿ, ಮನಸೆಲ್ಲ ಬರಿದಾಗಿ
ಮುಂದಾರಿ ಕಾಣದೆಯೆ ಬಲಹೀನ ನಾನಾಗಿ
ಕುಸಿ ಕುಸಿದು ಬೀಳುವೆನು ಇಂದು ನಾ ಮನೆಯಲ್ಲಿ
ಎಂದು ಬರುವೆಯೊ ಎಂದು ಕಾದಿರುವೆ ನಿನಗಿಲ್ಲಿ ||೪||

ಬಾ ಬೇಗ ಬಾ ಮಗನೆ ಓಡೋಡಿ ಬಾ ಮಗನೆ
ನಾ ಹಡೆದ ಚಿನ್ನಾರಿ ಕನ್ನಡದ ಕಸ್ತೂರಿ
ಅಣ್ಣತಮ್ಮಂದಿರೊಳು ನೀ ಬಂದು ಜೊತೆ ಸೇರಿ
ಒಂದಾಗಿ ನೀ ಬಾಳು ಸುಖದಿಂದ ಎಲೆ ಮಗನೆ ||೫||

* * *

ಮುಟ್ಟಿದರೆ ಮುನಿ

ಮುಟ್ಟಬೇಡ, ಮುಟ್ಟಬೇಡ,
ಮುಟ್ಟಬೇಡ ಎನ್ನ
ಕೊಲ್ಲಬೇಡ, ಕೊಲ್ಲಬೇಡ,
ಕೊಲ್ಲಬೇಡ ಎನ್ನ.

ಮುಟ್ಟನೋಡ ಬೇಡ, ಬೇಡ
ನೋಡಿ ನಲಿಯ ಬೇಡ
ಮುಟ್ಟಿದರೆ ನಾ ಮುನಿವೆ
ಮುಟ್ಟಬೇಡ ಎನ್ನ.

ಮುಟ್ಟಿ ನಲಿಯ ಬೇಡ ಎನ್ನ
ನಲಿದು ಕುಣಿಯ ಬೇಡ
ಮುಟ್ಟಿದರೆ ನಾ ಮುನಿವೆ
ಮುಟ್ಟಬೇಡ ಎನ್ನ.

* * *

ಗಿಳಿಯೇ! ಗಿಳಿಯೇ!

ಗಿಳಿಯೇ! ಗಿಳಿಯೇ!
ಮುದ್ದಿನ ಮರಿಯೆ
ಹಣ್ಣನು ತಂದಿಹೆನು
ಬಾಳೆಯ ಹಣ್ಣು
ಮಾವಿನ ಹಣ್ಣು
ಜೇಬಲಿ ತಂದಿಹೆನು ||೧||

ಪಿಟಪಿಟ ಎಂದು
ಬಾಯನು ತೆರೆದು
ಮಾತನು ಆಡುವೆಯ
ಅಣ್ಣನು ಬಂದ
ಹಣ್ಣನು ತಂದ
ಎನ್ನುತ ಹಾಡುವೆಯ ||೨||

ಹಾಲನು ತರುವ
ಹಳ್ಳಿಯ ಹೈದ
ಬಂದರೆ ಕರೆಯುವೆಯ
ಹಳ್ಳಿಯ ಹೈದ
ಹಾಲನು ತಂದ
ಎನ್ನುತ ಕೂಗುವೆಯ ||೩||

ಹಳ್ಳಿಗೆ ಹೋಗಿ
ಅಕ್ಕನನಿಂದು
ಹಬ್ಬಕೆ ಕರೆತರುವೆ
ಅಕ್ಕನು ಬಂದ್ರೆ
ವಂದಿಪೆನೆಂದ್ರೆ
ಅದುವೇ ಸಾಕೆನಗೆ ||೪||

ಹೃದಯ ಹೂವಿನ ಚಂದಿರ

ನಮ್ಮ ಚಂದಿರ ಪೂರ್ಣ ಚಂದಿರ
ಹೃದಯ ಬಾನಿನ ಸುಂದರ
ನಮ್ಮ ಚಂದಿರ ಸ್ವರ್ಣ ಚಂದಿರ
ಸ್ವರ್ಗ ಸೊಬಗಿನ ಸುಂದರ
ನಮ್ಮ ಚಂದಿರ ಗಿರಿಯ ಶಿಖರವ-
ನೇರಿ ಬರುತಿಹ ಬಂಧುರ
ನಮ್ಮ ಚಂದಿರ ಮೋಡ ತಿರೆಗಳ
ದಾಟಿ ಬರುತಿಹ ಸುಂದರ (೧)

ಅಳುವ ಮಕ್ಕಳ ನಕ್ಕು ನಗಿಸುವ
ಹೃದಯ ಹೂವಿನ ಚಂದಿರ
ಮುದ್ದು ಮಕ್ಕಳ ಗೆಳೆಯ ಚಂದಿರ
ಬೆಳ್ಳಿ ತಟ್ಟೆಯ ಬಂಧುರ
ಹಳ್ಳಿ ಮಕ್ಕಳ ಹಾಡಿ ಕುಣಿಸುವ
ನೀಲ ಬಾನಿನ ಇಂದಿರ
ನಮ್ಮ ಎಳೆಯರ ನಮ್ಮ ಗೆಳೆಯರ
ಅಚ್ಚು ಮೆಚ್ಚಿನ ಸುಂದರ (೨)

ರವಿಯ ಕಾಂತಿಯ ಕದ್ದು ಚಂದಿರ
ಬುವಿಗೆ ಬೆಳಕನು ತರುವನು
ಕೋಟಿ ಕೋಟಿಯ ಜ್ಯೋತಿ ಬೆಳಕನು
ಮೂಲೆಗೊತ್ತಿಸಿ ನಗುವನು

ಬೆಳ್ಳಿ ಚೆಲ್ಲಿದ ಕಿರಣ ಬೆಳಕನು
ಹರಡಿ ಜಗವನು ಪೊರೆವನು
ಬಾಲ ಬಾಲರ ಬಾಲಬಾಷೆಯು
ಕೇಳಿ ಚಂದಿರ ನಲಿವನು (೩)

* * *

ಶಿವರಾತ್ರಿ

ಶಿವಶಿವ ಎನುತಲಿ
ಶಿವರಾತ್ರಿ ಬರುತಿದೆ
ಆಡಿ ಆಡಿ ಗೆಜ್ಜೆಯ
ಕುಣಿಸುತ ಬರುತಿದೆ
ಜನಮನ ಸೆಳೆಯುತ
ತನುಮನ ಕುಣಿಸುತ
ನಲಿಯುತ ಬರುತಿದೆ
ಉಲಿಯುತ ಬರುತಿದೆ
ನೀನಾನೆಂಬುವ
ಭೇದವ ತೋರದೆ
ಎಲ್ಲರ ಹಿತವನು
ಬಯಸುತ ಬರುತಿದೆ
ಮಲ್ಲಿಗೆ ಹೂವಿನ
ಮೊಗ್ಗನ್ನರಳಿಸಿ
ಪರಿಮಳ ಗಂಧವ-
ನೆಲ್ಲೆಡೆ ಸೂಸಿ

* * *

ಊರಿಗೆ ಬಂದಿತು ಯುಗಾದಿ

ಊರಿಗೆ ಬಂದಿತು ಯುಗಾದಿ ಹಬ್ಬವು
ಹರುಷವ ತಂದಿತು ನಮಗೆಲ್ಲ
ಬೇವಿನ ಎಲೆಯೊಳು ಬೆಲ್ಲವ ಹಂಚಲು
ಕೆಲಸವ ಹಚ್ಚಿತು ದಿನವೆಲ್ಲ.

ತುಪ್ಪದ ಹೋಳಿಗೆ ಮಾಡಲು ಅಮ್ಮನು
ಹೋದಳು ಪೇಟೆಗೆ ಹರುಷದಲಿ
ತಂದಳು ಬೆಲ್ಲಾ ತೊಗರಿಯ ಬೇಳೆ
ಗೋಧಿಯ ಹಿಟ್ಟನು ಚೀಲದಲಿ.

ಬೆಲ್ಲದ ಬೇಳೆಯ ಪಾಕವನೆತ್ತಿ
ಹೂರಣ ಮಾಡಿದಳೊಲವಿನಲಿ
ಗೋಧಿಯ ಹಿಟ್ಟೊಳು ಹೂರಣವಿಟ್ಟು
ತಟ್ಟಳೆ ಬಾಳೆಯ ಎಲೆಯಲ್ಲಿ.

ಒಲೆಯ ಮೇಗಡೆ ಹಂಚನು ಕಾಯಿಸಿ
ಸುಟ್ಟಳು ಹೋಳಿಗೆ ಚೊಂಯ್ ಎಂದು
ಕೇಕೆಯ ಹಾಕುತ ಬಂದನು ಕಿಟ್ಟನು
ಕೇಳಿದ ಹೋಳಿಗೆ ಬೇಕೆಂದು.

ಊರಿನ ಮನೆಗಳ ಬಾಗಿಲ ತೋರಣ
ಮಾವಿನ ಎಲೆಗಳು ತುಂಬಿತ್ತು
ನೆಂಟರು ಭಂಟರನೆಲ್ಲರ ಕರೆಯಿಸಿ
ಯುಗಾದಿ ಹೋಳಿಗೆ ಮಾಡಿತ್ತು.

ಯುಗಾದಿ ಬಂದಿತು ಯುಗಾದಿ ಎನ್ನುತ
ಬಾಲರು ನಲಿನಲಿದಾಡಿದರು
ಅಮ್ಮನು ಮಾಡಿದ ಹೋಳಿಗೆ ತಿಂದೂ
ಬಾಲರು ಕುಣಿಕುಣಿದಾಡಿದರು.

*　　　*　　　*

ನರಿಯ ಯುಕ್ತಿ

ಕಾಡಿನೊಂದು ನರಿಯು ಅಂದು
ಬಿಸಿಲ ಬೇಗೆಯಿಂದ ಬೆಂದು
ನೀರಿಗಾಗಿ ಸುತ್ತಿ ಸುಳಿದು
ಹುಡುಕುತಲೆಯಿತು.

ಕಾಡ ಬಳಿಯಲೊಂದು ತೋಟ
ಅದರ ಕಣ್ಗೆ ಕಾಣಲದುವು
ಬೇಗ ದಾಹ ನೀಗಿಕೊಳಲು
ಸಾಗಿ ನಡೆಯಿತು.

ತೋಟದಲ್ಲಿ ದೊಡ್ಡದೊಂದು
ಬಾವಿಯನ್ನು ನರಿಯು ಕಂಡು
ನೀರಿನಲ್ಲಿ ಬೇಗ ಧುಮಿಕಿ
ನೀರು ಕುಡಿಯಿತು.

ಹೊಟ್ಟೆ ತುಂಬ ನೀರು ಕುಡಿದು
ನಲವಿನಿಂದ ನರಿಯು ಅಂದು
ಬಾವಿಕಟ್ಟೆಮೇಲೆ ಬರಲು
ಜಿಗಿಯತೊಡಗಿತು.

ಜಿಗಿದು ಜಿಗಿದು ಕಾಲ್ಗಳೆಲ್ಲ
ಕುಸಿದು ಬೀಳೆ, ಹೊಟ್ಟೆ ತುಂಬ
ನೀರು ತುಂಬಿ ಸಾಯುವಂತ
ಸ್ಥಿತಿಗೆ ಬಂದಿತು.

ಪಾಪ! ಒಂದು ಹೋತನಂದು
ದಾಹದಿಂದ ನೀರಿಗೆಂದು
ಹುಡುಕಿ ಬಂದು ಬಾವಿಯನ್ನು
ಇಣಿಕಿ ನೋಡಿತು.

ಬಾವಿಯಲ್ಲಿ ಇದ್ದ ನರಿಯು
ಕಂಡು ಹೋತ ಕೂಡಲದನು
ನೀರು ಇದೆಯೆ ಬಾವಿಯಲ್ಲಿ
ಎಂದು ಕೇಳಿತು.

ಸಾಯುವಂತೆ ಇದ್ದ ನರಿಯು
ಬಹಳ ಗೆಲುವಿನಿಂದ ಆದುವು
"ಹೋತರಾಜ" ನೀರು ಬಹಳ
ಸಿಹಿಯು ಎಂದಿತು.

ಸಿಹಿಯು ನೀರು ಕುಡಿದು ನಾನು
ಹೊಟ್ಟೆತುಂಬ ತುಂಬಿಕೊಂಡು
ನೀರಿನಲ್ಲಿ ಹರುಷದಿಂದ
ಈಜುತಿರುವೆನು.

"ನೀನು ಸಹಾ ಬಾವಿಗಿಳಿದು
ಸಿಹಿಯು ನೀರು ರುಚಿಯು ಕಂಡು
ತೃಪ್ತಿಯಿಂದ ಇರುವೆಯಂತೆ"
ಎಂದು ಕರೆಯಿತು.

ಠಕ್ಕ ನರಿಯು ನುಡಿಗೆ ಹೋತ
ಮರುಳುಗೊಂಡು ಹರುಷದಿಂದ
ನೀರು ಕುಡಿಯೆ ಬಾವಿಯೊಳಗೆ
ಬೇಗ ಧುಮಿಕಿತು.

ಧುಮಿಕಿದೊಡನೆ ನರಿಯು ಬೇಗ
ಹೋತ ಬೆನ್ನ ಮೇಲೆ ಹಾರಿ
ಬಾವಿಕಟ್ಟೆ ದಾಟಿ ಪ್ರಾಣ
ಉಳಿಸಿಕೊಂಡಿತು.

"ಹೋತರಾಜ" ಪುಣ್ಯ ಬರಲಿ
ನಿನ್ನ ಕರುಣದಿಂದ ನಾನು
ಬದುಕಿಕೊಂಡೆ ನಮಸ್ಕಾರ
ಎಂದು ಹೊರಟಿತು.

* * *

ಬನ್ನಿರಿ ಗೆಳೆಯರೆ

ಬನ್ನಿರಿ ಗೆಳೆಯರೆ ಬನ್ನಿರಿ ಎಲ್ಲರು
ಬನ್ನಿರಿ ಈ ದಿನ ನಲವಿಂದ
ವರುಷದ ಹಬ್ಬವು ಹರುಷದ ದಿನವಿದು
ಬನ್ನಿರಿ ನಲಿಯುವ ಗೆಲುವಿಂದ ||

ಗಗನದ ಜ್ಯೋತಿ ಬೆಳಗುತಿರೆ
ಬೆಳ್ಳಿಯ ಹಾಲು ಸುರಿಯುತಿರೆ
ರತ್ನದ ತಾರೆ ಮಿನುಗುತಿರೆ
ಹರುಷವ ನಮಗೆ ನೀಡುತಿರೆ ||

ಸಿಂಧೂ, ಗಂಗಾ, ಯಮುನೆಯರು
ಬ್ರಹ್ಮಪುತ್ರಾ, ಗೋದೆಯರು
ಹರಿದು ನಲಿದು ಪಾಡುತಿರೆ
ಸರ್ವ ಶಕ್ತಿ ನೀಡುತಿರೆ ||

ಶಾಂತಿ ಸೌಖ್ಯದಾಲಯಕೆ
ಧರ್ಮ ರಾಜ್ಯದಾಲಯಕೆ
ಸತ್ಯ ಪ್ರೀತಿಯಾಲಯಕೆ
ನೀತಿಯಿಂದ ನಡೆಯಲಿಕೆ ||

ಭರತಖಂಡದಾಲಯಕೆ
ಭಾರತಾಂಬೆಯಾಲಯಕೆ
ಭಲರೆ ಭಾಪು ಭಾರತಕೆ
ವೀರರಾಗಿ ಬಾಳಲಿಕೆ ||

* * *

ಚಂದಿರನೆಲ್ಲಿಗೆ ಪೋಗಿಹನಮ್ಮ

ಚಂದಿರನೆಲ್ಲಿಗೆ ಪೋಗಿಹನಮ್ಮ
ಕತ್ತಲೆ ಕವಿದಿದೆ ಎಲ್ಲ ಕಡೆ ?
ಬಾನಲಿ ತೇಲುತ ಚಂದಿರನೆಂದಿಗೆ
ತರುವನು ಬೆಳಕನು ಬುವಿಯ ಕಡೆ ?

ಕತ್ತಲೆಯಾಗಲು ಹಕ್ಕಿಗಳೆಲ್ಲಾ
ಗೂಡನು ಸೇರಿದುವಲ್ಲಲ್ಲಿ.
ಚಂದಿರನಿಲ್ಲದೆ ಚುಕ್ಕಿಗಳೆಲ್ಲಾ
ಮಸಕಾಗಿರುವುವು ಬಾನಲ್ಲಿ.

ಗೆಳೆಯನು ಚಂದಿರ ತಾ ಇರುವನಕ
ಮನವಿದು ಹಿಗ್ಗಿತು ಗೆಲುವಿನಲಿ.
ಸ್ನೇಹಿತ ಚಂದಿರ ತಾ ಬರುವನಕ
ಮನವಿದು ತೊಳಲಿತು ದುಗುಡದಲಿ.

ಲೋಕದ ಜ್ಯೋತಿಯು ಚಂದಿರಮಾಮ
ಆಗಲೆ ಬಂದನು ನೋಡಲ್ಲಿ.
ಎಲ್ಲರ ಮನೆಗೂ ಬೆಳಕನು ತಂದಿಹ
ಚಂದಿರ ಮಾಮನ ನೋಡಲ್ಲಿ.

* * *

ಶಾಂತಿಯ ಸ್ವರಾಜ್ಯ

ಸತ್ಯ ಅಹಿಂಸೆ ಶಾಂತಿ
ಈ ಜೀವನಕವು ನೀಡಿವೆ ಕಾಂತಿ ||

ಮಹಾತ್ಮ ಗಾಂಧಿಯು ತಾ ನಮಗಾಗಿ
ಶಾಂತಿಯ ಸಮರವ ಮಾಡಿದ ಯೋಗಿ
ಘನ ಆಂಗ್ಲೇಯರ ನೀತಿಲಿ ಜಯಿಸಿ
ಸ್ವರಾಜ್ಯ ತಂದ ದೇಶಕೆ ಶ್ರಮಿಸಿ
ಆಹಾ ಭಾರತ ಗಾಂಧಿ
ನಮ್ಮಾ ಮಹಾತ್ಮ ಗಾಂಧಿ

ನಾಡೊಳು ಶಾಂತಿಯು ನೆಲೆಸಿದ ಮೇಲೆ
ಮಮತೆಯು ಹೆಚ್ಚಿತು ಗಾಂಧಿಯ ಮೇಲೆ
ಹಿಂದೂ, ಮುಸ್ಲಿಂ, ಕ್ರೈಸ್ತರು ನಾವು
ಸೋದರ ಭಾವದಿ ಇರುವೆವು ನಾವು
ಬಾಪೂ ಮಹಾತ್ಮ ಗಾಂಧಿ
ನಮ್ಮಾ ಮಹಾತ್ಮ ಗಾಂಧಿ

* * *

ಮನದಣಿಯೆ ಮಧು ಉಣ್ಣ ಬಾ

ಮನದಣಿಯೆ ಮಧು ಉಣ್ಣ ಬಾ
ಎಲೆ ದುಂಬಿ ನಲಿದಾಡಿ ಬಾ ||

ಬನ ಬನದ ಗಿಡ ಗಿಡದ
ಸುಮರಾಶಿ ಅರಳಿಹುದು
ನಿನಗಾಗಿ ಕಾದಿಹುದು
ಎಲೆ ದುಂಬಿ, ಹಾರಾಡಿ ಬಾ ||

ಮಧು ತರಲು ನೀ ಬರಲು
ಮಧುವರಸಿ ಕಾದಿಹಳು
ಜೇನ್ಗೊಡವ ತುಂಬಿಡಲು
ಎಲೆ ದುಂಬಿ, ನಲಿದಾಡಿ ಬಾ ||

ಸ್ವಚ್ಛಂದ ಆಕಾಶ
ಮೈಯೆಲ್ಲ ಹುಲಿವೇಷ
ನಿನಗಂತು ಸಂತೋಷ
ಎಲೆ ದುಂಬಿ, ಕುಣಿದಾಡಿ ಬಾ ||

*   *   *

"ನೆನೆದೇವು ನಾವು"

ಪೇಟೇಗೆ ಹೊರಟೇವು ನಾವು
ಪೇಟೇಗೆ—ಹೊರಟಂದು ಗೊಂಬೆ
ತಂದೇವು ನಾವು
ಒಲವಿಂದ ತಂದೇವು ನಾವು||

ಬಲು ಹಿರಿಮೆಯಿಂದ ನಾವೆಲ್ಲ ಕೂಡಿ
ಗೊಂಬೆಗಳ ಪೂಜೆಯ ಮಾಡಿದೆವು
ನಮ್ಮೆಲ್ಲ ಜೊತೆಯವರ ಕೂಡಸೇರಿ
ನಾವೆಲ್ಲ ಪಾಡುಗಳ ಹಾಡಿದೆವು
ನೆರೆಹೊರೆಯರೆಲ್ಲ ಬಲು ಹೆಮ್ಮೆಯಿಂದ
ಒಂದಾಗಿ ಸೇರುತ್ತ ಹಾಡಿದೆವು ||

ನಲಿದೇವು ನಾವು ಕುಣಿದೇವು ನಾವು
ಎಡಬಿಡದೆ ನಾವು ಸೊಗಸಿಂದ
ಶಿವ ಶಿವನೆ ಎಂದು ಹರ ಹರನೆ ಎಂದು
ನೆನೆದೇವು ನಾವು ಒಲವಿಂದ.

× × ×

ಲಾಲ್‌ಬಾಗ್ (ಕೆಂಪು ತೋಟ)

ಕೆಂಪು ತೋಟವಿದು
ಹೂವು ತೋಟವಿದು
ಸ್ವರ್ಗ ಸೊಬಗಿನ ಸುಂದರ |
ದಿವ್ಯ ತೋಟವಿದು
ಭವ್ಯ ಭವನವಿದು
ಹರ್ಷವೀಯುವ ಬಂಧುರ ||

ಹೂವು ತೋಟದಲಿ
ಮಧುರ ಗಾನದಲಿ
ಜಗವ ಮರೆತಿದೆ ಕೋಗಿಲೆ |
ಕೆಂಪು ತೋಟದಲಿ
ನಾಟ್ಯ ಭಂಗಿಯಲಿ
ನವಿಲು ನಿಂತಿದೆ ಬೆತ್ತಲೆ ||

ಕೊಳದ ತಾವರೆಯು
ಬನದ ಮಲ್ಲಿಗೆಯ
ನಗುವ ನಂದನ ವನವಿದು |
ಕಾಯಿ ಪಲ್ಯಗಳ
ವಿವಿಧ ಹಣ್ಣುಗಳ
ತುಂಬು ಗಿಡಮರ ಬನವಿದು ||

ಜೀವ ಜಂತುಗಳ
ವಿವಿಧ ಪಕ್ಷಿಗಳ
ದುಂಬಿವಿಂಡಿನ ಮಧುವನ ।
ಸಂಜೆ ವೇಳೆಯಲಿ
ತಾಳ ಮೇಳಗಳ
ತುಂಬು ನಾದದ ಸುರವನ ॥

ಬಾಲ ಬಾಲೆಯರ
ನಲ್ಲ ನಲ್ಲೆಯರ
ನಲಿಸಿ ನಗಿಸುವ ಸೊಗವನ ।
ಭುವನ ಮೋಹಿನಿಯು
ಭುವನ ಸ್ವರ್ಗವಿದು
ಕನ್ನಡಾಂಬೆಯು ಸಿರಿವನ ॥

*　　　　*　　　　*

ದೀಪಾವಳಿ

ಬಂದಿತು ಬಂದಿತು ದೀಪಾವಳಿ !
ತಂದಿತು ಸೊಬಗಿನ ಕಳೆ ಇಲ್ಲಿ !
ತುಂಬಿತು ಹರುಷವ ಮನದಲ್ಲಿ !

ಹೆಜ್ಜೆ ಹೆಜ್ಜೆಗೂ ಗೆಜ್ಜೆಯು ಕುಣಿಸುತ
ಸಡಗರದಿಂದಲಿ ದೀಪಾವಳಿ
ಕೋಟಿ ಕೋಟಿಯಾ ಸಾಲಿನ ದೀಪವ
ಬೆಳಗುತ ಬಂದಿತು ದೀಪಾವಳಿ ||

ಮುದ್ದು ಮುದ್ದಿನಾ ಮುದ್ದಿನ ಮಕ್ಕಳ
ಮುದ್ದನು ಚೆಲ್ಲುತ ದೀಪಾವಳಿ
ಢಂ ಢಂ ಚಟ ಚಟ ಸದ್ದನು ಮಾಡುತ
ಪಟಾಕಿ ಸದ್ದಿನ ದೀಪಾವಳಿ ||

ಹಳ್ಳಿ ಹಳ್ಳಿಯಾ ಹಳ್ಳಿಯ ಹೈದರ
ಕುಣಿಸುತ ಕುಣಿಯುತ ದೀಪಾವಳಿ
ಬಾಲ ಬಾಲೆಯರ ಬಾಲಲೀಲೆಗಳ
ನೋಡುತ ನಲಿಯುತ ದೀಪಾವಳಿ ||

ಸಗ್ಗದ ಸೊಬಗನು ಬುವಿಗಿಳಿತಂದಿತು
ಸಗ್ಗದ ಸೊಬಗಿನ ದೀಪಾವಳಿ
ವರುಷದ ಹಬ್ಬದ ಹರುಷದ ದಿನವನು
ಹಿಗ್ಗುತ ತಂದಿತು ದೀಪಾವಳಿ ||

*   *   *

ಸಂತೆಗೆ ಹೋದನು ಪುಟ್ಟಣ್ಣ

ಸಂತೆಗೆ ಹೋದನು ಪುಟ್ಟಣ್ಣ
ಪುರಿಯನು ಕೊಂಡನು ಕುಳ್ಳಣ್ಣ ||

ಪುರಿಯನು ತಿನ್ನುತ ನೋಡಿದನು
ಕೋತಿಯ ಹಿಂಡನು ಬಂದುದನು ||

ಅಳುತಾ ಅಮ್ಮನ ಕೂಗಿದನು
ಓಡುತ ಅಮ್ಮನ ಸೇರಿದನು ||

ಓಡುವ ಭರದಲಿ ಪುರಿಯೆಲ್ಲ
ಹರಡಿತು ಕೂಡಲೆ ನೆಲವೆಲ್ಲ ||

ಮಂಗಗಳೋಡುತ ಮರದಡಿಗೆ
ತಿನ್ನಲು ಬಂದವು ಪುರಿಯೆಡೆಗೆ ||

ತಿಂದವು ಪುರಿಯನು ಒಲವಿಂದ
ನೋಡಿದ ಪುಟ್ಟನು ಬೆರಗಿಂದ ||

ತೈ ತೈ ಕುಣಿದನು ಪುಟ್ಟಣ್ಣ
ಕೈ ಕೈ ತಟ್ಟುತ ಕುಳ್ಳಣ್ಣ

× × ×

ಪರೋಪಕಾರ

ಸತ್ಯವನುಳಿಸಿರಿ, ಧರ್ಮವ ಮಾಡಿರಿ,
ಶಾಂತಿಯು ನೆಲೆಸಿರಿ ಧರೆಯೊಳಗೆ
ನಿಜವನೆ ನುಡಿಯಿರಿ, ನೀತಿಲಿ ನಡೆಯಿರಿ,
ಸ್ವಾರ್ಥವ ತುಳಿಯಿರಿ ಬುವಿಯೊಳಗೆ ||

ತಾಯಿ ತಂದೆಯರ ಸೇವೆಯ ಮಾಡುತ
ಮುಕ್ತಿಯ ಪಡೆಯಿರಿ ಇಳೆಯೊಳಗೆ
ಸೋದರ ಸಹೃದ ಭಾವನೆಯಿಂದಲಿ
ಜೀವನ ನಡೆಸಿರಿ ಜಗದೊಳಗೆ ||

ಜಾತಿ ವಿಜಾತಿಯು ಎನ್ನುವರೆಲ್ಲರು
ಕಣ್ಣಿಗೆ ಕಾಣುವ ಕುಲವಿಹುದೆ ?
ಹೆಣ್ಣೂ ಗಂಡೂ ಎನ್ನುವರೆಲ್ಲರು
ಮತವೆರಡೆಂಬುದ ತಿಳಿದಿಹುದೆ ? ||

ಕುಡಿಯುವ ನೀರಿಗೆ, ನಡೆಯುವ ಭೂಮಿಗೆ,
ಸೇವಿಪ ಗಾಳಿಗೆ ಕುಲವಿಹುದೆ ?
ಆಡುವ ಮಾತಿಗೆ, ನಡೆಯುವ ನಡತೆಗೆ,
ನೋಡುವ ನೋಟಕೆ ಕುಲವಿಹುದೆ ? ||

ಎಲ್ಲದರಲ್ಲಿಯು ಎರಡೆರಡುಳಿಯಿತು
ಮಾತಿನ ಮಮತೆಯು ಸುಳಿಯಲ್ಲಿ
ಜೀವನವೆಲ್ಲಾ ನಾವೆಯು ಹೋಲುತೆ
ಸಾಗರ ಮಧ್ಯದ ಜಲದಲ್ಲಿ ||

ಪರರನು ದೂರದೆ, ಪರರನು ಕಾಡದೆ
ಪರರಿಗೆ ಕೇಡನು ಬಯಸದಿರಿ
ಪರೋಪಕಾರವ ಮಾಡುತ ಎಲ್ಲರು
ಗಾಂಧಿಯ ತತ್ವವ ಮರೆಯದಿರಿ ||

* * *

ವಾಣೀ ವೀಣಾ

ವಾಣೀ ವೀಣಾ ಸರಸತಿ ಮಾತೆ—
ಅಂಬಾ—ಜಯ ಜಯ ಜಗದಂಬಾ—
ಅಂಬಾ....||

ಮಧುರ ಮನೋಹರ ವೀಣಾಗಾನ
ಮಿಡಿದರೆ ನುಡಿಯುತೆ ಮಂಜುಳ ಗಾನ || ಅಂಬಾ ||

ಸರಸ್ವತಿ ಧ್ಯಾನ ನಿಜ ಭಕ್ತಿ ಮಾರ್ಗ
ರಸಭರಿತ ಜ್ಞಾನ ನಿಜ ಮುಕ್ತಿ ಮಾರ್ಗ || ಅಂಬಾ ||

ವೀಣಾಮೃತ ಪಾದ ಸೇವಾಮೃತ
ಜೀವಾಮೃತ ನಿತ್ಯ ಪೊರೆವಾಮೃತ || ಅಂಬಾ ||

* * *

ಸ್ವರ್ಣ ದೀಪ

ಅದೋ ಅಲ್ಲಿ ಸ್ವರ್ಣ ದೀಪ
ಕಾಣುತಿದೆ ಕಣ್ಣಿಗೆ
ದಾರಿ ಬೇಗ ನಡೆದು ನಡೆದು
ಹೋಗಿ ಸೇರುವಲ್ಲಿಗೆ.

ದಾರಿಯಲ್ಲಿ ಕಲ್ಲು, ಮುಳ್ಳು
ಚುಚ್ಚುವೆಂದು ಬೆದರದೆ
ಮುಂದೆ ಸಾಗಿ ಒಂದೆ ಮನದೆ
ನಡೆಯಿರೆಲ್ಲ ನಿಲ್ಲದೆ.

ಕಾಡಿನಲ್ಲಿ ಹುಲಿಯು, ಸಿಂಹ
ಬರುವವೆಂದು ಅಂಜದೆ
ಹೇಡಿತನವ ತೊರೆದು ಬೇಗ
ಇರಿದು ಕೊಲ್ಲಿ ನೋಡದೆ.

ಸಿಡಿಲು, ಗುಡುಗು, ಮಿಂಚುಬಳ್ಳಿ,
ಎಸಗುತಿವೆ ನಭದೊಳು
ಕಾರ್ಮೋಡ ಹೊತ್ತು ತಂದ
ಮಳೆಯು ಸುರಿಯಿತಿಳೆಯೊಳು.

ಮಳೆಯು ಸುರಿದು ಬಟ್ಟೆ ತೊಯ್ದು
ಚಳಿಯು ನಮ್ಮ ನಡುಗಿಸೆ
ಸಹನೆಯಿಂದ ಚಳಿಯ ತಡೆದು
ನಡೆವುದೆಮ್ಮ ಭರವಸೆ.

ಸ್ವರ್ಣ ದೀಪವದೋ ಅಲ್ಲಿ
ನಮ್ಮ ಕರೆಯುತಿರುವುದು
ಶಿವಾಲಯದ ಶಿವನ ಪೂಜೆ
ಅಲ್ಲಿ ನಡೆಯುತಿರುವುದು.

ಸಂಪೂರ್ಣಂ



ಪುಸ್ತಕ ದೊರೆಯುವ ಸ್ಥಳ :--
ಎಸ್. ರಾಮಪ್ಪ (ಶಾಂತಿರಾಂ)
"ನಂದನ" ನಂ. 56, ಸ್ವಸ್ತಿ ರಸ್ತೆ, ಶಾಂತಿನಗರ
ಬೆಂಗಳೂರು-27

ರೋಹಿಣಿ ಪ್ರಿಂಟರ್ಸ್, ಅರಳೇಪೇಟೆ, ಬೆಂಗಳೂರು-53



ಬೆಳುದಿಂಗಳು

(ಮಕ್ಕಳ ಹಾಡುಗಳು)

★

ಲೇಖಕರು :

ಎಸ್. ರಾಮಪ್ಪ
(ಶಾಂತಿರಾಂ)

'ನಂದನ' ನಂ. 56, ಸ್ವಸ್ತಿ ರಸ್ತೆ
ಶಾಂತಿನಗರ, ಬೆಂಗಳೂರು-27

ಕೃತಜ್ಞತೆ

1979-80ನೇ ಸಾಲಿಗೆ ಕರ್ನಾಟಕ ರಾಜ್ಯದ ಪ್ರಾಥಮಿಕ ಶಾಲೆಗಳ ಗ್ರಂಥ ಭಂಡಾರಕ್ಕೆ ಹಂಚಲು ನನ್ನ "ಮರಿದುಂಬಿ" ಮಕ್ಕಳ ಕವನಗಳ ಪುಸ್ತಕವನ್ನು ವಿದ್ಯಾ ಇಲಾಖೆಯ ಪ್ರಾಥಮಿಕ ಶಿಕ್ಷಣ ನಿರ್ದೇಶಕರೂ ಮತ್ತು ಸಭೆಯ ಸದಸ್ಯರೂ ಆರಿಸಿ ಪ್ರೋತ್ಸಾಹಿಸಿದ್ದಾರೆ. ಇದಕ್ಕಾಗಿ ಅವರುಗಳಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಎಸ್. ರಾಮಪ್ಪ
(ಶಾಂತಿರಾಂ)